# ರಫ್ ಅಂಡ್ ಟಫ್ 'ಭುಜಂಗ'



'ನನ್ನ ವೃತ್ತಿ ಜೀವನದಲ್ಲಿ ಇದೊಂದು ಮಹತ್ವದ ಸಿನಿಮಾ'. 'ಭುಜಂಗ' ಚಿತ್ರದ ಬಗ್ಗೆ ಪ್ರಜ್ವಲ್ ದೇವರಾಜ್ ಅವರ ಬಣ್ಣನೆ ಇದು.

'ಭುಜಂಗ' ಸಿನಿಮಾದ ಬಗ್ಗೆ ಪ್ರಜ್ವಲ್ ಭಾವುಕರಾಗಿ ಮಾತನಾಡುವುದಕ್ಕೆ ಕಾರಣವಿದೆ. ಅವರ ವೃತ್ತಿಜೀವನದ ಇಪ್ಪತ್ತೈದನೇ ಸಿನಿಮಾ ಎನ್ನುವ ವಿಶೇಷಣದೊಂದಿಗೆ ಸೆಟ್ಟೇರಿದ ಈ ಸಿನಿಮಾ ಕೊಂಚ ತಡವಾಗಿಯಾದರೂ ಈಗ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ. ಅಲ್ಲದೆ, ಇದೇ ಮೊದಲ ಬಾರಿಗೆ ಹೆಚ್ಚು ಸಾಹಸ ದೃಶ್ಯಗಳಲ್ಲಿ ಅವರು ಕಾಣಿಸಿಕೊಂಡಿದ್ದಾರೆ. 'ಇದೊಂದು ದೊಡ್ಡ ಮಟ್ಟದ ಸಾಹಸಭರಿತ ಸಿನಿಮಾ' ಎನ್ನುವ ಬಣ್ಣನೆ ಅವರದು. ಸಾಹಸ ನಿರ್ದೇಶಕ ಮಾಸ್ ಮಾದ ಅವರು ಪ್ರಜ್ವಲ್‌ರನ್ನು ಸಾಕಷ್ಟು ಗೋಳು ಹೊಯ್ದುಕೊಂಡು ಕೆಲಸ ತೆಗೆಸಿದ್ದಾರಂತೆ. ಪ್ರಜ್ವಲ್ ಅವರು ಕೆಲವು ಸನ್ನಿವೇಶಗಳಲ್ಲಿ ಡ್ಯೂಪ್ ಇಲ್ಲದೆ ನಟಿಸುವ ಮೂಲಕ ಚಿತ್ರ ಚೆನ್ನಾಗಿ ಬರಲು ಸಹಕರಿಸಿದ್ದಾರೆ. ಈ ಸಾಹಸಮಯ ಕಥನಕ್ಕಾಗಿ ಪ್ರಜ್ವಲ್ ತಕ್ಕಮಟ್ಟಿಗೆ ತಮ್ಮ ವೇಷವನ್ನೂ ಬದಲಿಸಿಕೊಂಡಿದ್ದಾರೆ. ಗಡ್ಡ ಮೀಸೆ ಬಿಟ್ಟುಕೊಂಡು ಒರಟು ಹುಡುಗನಂತೆ ಅವರು ಸಿನಿಮಾದಲ್ಲಿ ಕಾಣಿಸಿಕೊಂಡಿದ್ದಾರೆ.

ಜೀವಾ ಚೊಚ್ಚಿಲ ನಿರ್ದೇಶನದ 'ಭುಜಂಗ' ಚಿತ್ರದ ಬಜೆಟ್ ಅಂದಾಜು ಮಾಡಿದ್ದಕ್ಕಿಂತಲೂ ಹೆಚ್ಚಾಗಿದೆಯಂತೆ. ಆದರೆ, ನಿರ್ಮಾಪಕರು ಬಜೆಟ್ ಬಗ್ಗೆ ತಲೆಕೆಡಿಸಿಕೊಂಡಿಲ್ಲ. 'ಸಿನಿಮಾ ಚೆನ್ನಾಗಿ ಬಂದಿದೆ. ನಮ್ಮ ಶ್ರಮವನ್ನು ಪ್ರೇಕ್ಷಕರು ಮೆಚ್ಚಿಕೊಳ್ಳಲಿದ್ದಾರೆ' ಎನ್ನುವ ನಂಬಿಕೆ ನಿರ್ಮಾಪಕ ಮಹೇಶ್ ಅವರದು. ಅಂದ ಹಾಗೆ, ಬಿ.ಎ. ಮಧು ಅವರ ಕಥೆ, ಚಿತ್ರ ಕಥೆ ಮತ್ತು ಸಂಭಾಷಣೆ ಚಿತ್ರಕ್ಕಿದೆ.

'ನೂರು ಜನ್ಮಕೂ' ಚಿತ್ರದ ನಾಯಕ ಸಂತೋಷ್ 'ಭುಜಂಗ' ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟಿಸಿದ್ದಾರೆ. ಪ್ರಜ್ವಲ್ ಅವರ ಸ್ನೇಹಕ್ಕೆ ಕಟ್ಟುಬಿದ್ದು ಅವರು ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಭುಜಂಗ' ಚಿತ್ರದ ನಾಯಕಿ ಮೇಘನಾ ರಾಜ್. ಪೂರ್ಣ ಚಂದ್ರ ತೇಜಸ್ವಿ ಸಂಗೀತ ಹಾಗೂ ಗುಂಡ್ಲುಪೇಟೆ ಸುರೇಶ್ ಛಾಯಾಗ್ರಹಣ 'ಭುಜಂಗ'ನಿಗಿದೆ.



# ಮಸ್ತಾನ್‌ರ ತಂಗಿಯ ಸೆಂಟಿಮೆಂಟ್!

ಕರ್ನಾಟಕದಲ್ಲಿನ ಜಾಹೀರಾತು ವಿನ್ಯಾಸದ ಜನಪ್ರಿಯ ಹೆಸರುಗಳಲ್ಲಿ ಮಸ್ತಾನ್ ಅವರದೂ ಒಂದು. ಮಸ್ತಾನ್ ಅವರೀಗ 'ಸಿತಾರ' ಎನ್ನುವ ಸಿನಿಮಾ ನಿರ್ದೇಶಿಸಿದ್ದಾರೆ. ಜಾಹೀರಾತಿಗಿಂತಲೂ ಹೆಚ್ಚು ಆಸ್ಥೆಯಿಂದ ಅವರು ಈ ಸಿನಿಮಾದ ವಿನ್ಯಾಸ ಮಾಡಿದ್ದಾರಂತೆ. 'ಸಿತಾರ' ಚಿತ್ರವನ್ನು ತೆರೆ ಕಾಣಿಸಲು ಅನಿವಾಸಿ ಭಾರತೀಯರಾದ ಡಾ. ವಿಜಯ್ ಬೆಂಬಲವಾಗಿ ನಿಂತಿದ್ದಾರೆ. 'ಸಿತಾರ' ಚಿತ್ರವನ್ನು ತೆರೆ ಕಾಣಿಸಿದ ನಂತರವೇ ಅಮೆರಿಕದ ವಿಮಾನ ಹತ್ತುವ ನಿರ್ಧಾರ ಅವರದು. ಅರ್ಧಕ್ಕೆ ನಿಂತಿದ್ದ ಚಿತ್ರವನ್ನು ಕೈಗೆತ್ತಿಕೊಂಡಿರುವ ಅವರಿಗೆ, ಒಂದು ಒಳ್ಳೆಯ ಚಿತ್ರವನ್ನು ತೆರೆಕಾಣಿಸುವ ಕಷ್ಟ ಅರ್ಥವಾಗುತ್ತಿದೆ. 'ಮನೆ ಕಟ್ಟಿನೋಡು, ಮದುವೆ ಮಾಡಿನೋಡು' ಗಾದೆಯ ಜೊತೆಗೆ 'ಸಿನಿಮಾ ಮಾಡಿನೋಡು' ಎನ್ನುವ ಮಾತನ್ನೂ ಸೇರಿಸಬೇಕು ಎನ್ನುವುದು ಅವರ ಒತ್ತಾಯ.

ಇಬ್ಬರು ಅಣ್ಣಂದಿರ ಮುದ್ದಿನ ಸೋದರಿಯೊಬ್ಬಳ ಕಥೆ 'ಮಸ್ತಾನ್' ಚಿತ್ರದಲ್ಲಿದೆ. ಸಿತಾರ ಹೆಸರಿನ ಈ ಸೋದರಿಯ ಪಾತ್ರದಲ್ಲಿ ನೇಹಾ ಪಾಟೀಲ್ ನಟಿಸಿದ್ದಾರೆ. ಹಳ್ಳಿ ಹುಡುಗಿಯ ಪಾತ್ರದಲ್ಲಿ ನಟಿಸಿರುವುದು ಅವರಿಗೆ ಖುಷಿ ಕೊಟ್ಟಿದೆ. ಅವರ ಸಂಭ್ರಮಕ್ಕೆ ಮತ್ತೂ ಒಂದು ಕಾರಣವಿದೆ. ನೇಹಾ ನಾಯಕಿಯಾಗಿ ಸಹಿ ಮಾಡಿದ ಮೊದಲ ಸಿನಿಮಾ ಇದಂತೆ. ಇದಾದ ನಂತರ ಒಂದಷ್ಟು ಅವಕಾಶಗಳು ಅವರಿಗೆ ಸಿಕ್ಕಿದ್ದರೂ, ಚೊಚ್ಚಿಲ ಅವಕಾಶದ ಬಗ್ಗೆ ಅವರಿಗೆ ಮೋಹವಿದೆ.

ಮಸ್ತಾನ್ ಅವರಿಗೆ 'ಸಿತಾರ' ಚಿತ್ರವನ್ನು ಪ್ರೇಕ್ಷಕರು ಒಪ್ಪಿಕೊಳ್ಳುವ ಬಗ್ಗೆ ವಿಶ್ವಾಸವಿದೆ. ಈ ಮುನ್ನ 'ಶುಕ್ಲಾಂಬರಧರಂ' ಮತ್ತು 'ಕಲ್ಲೇಶಿ ಮಲ್ಲೇಶಿ' ಚಿತ್ರ ನಿರ್ದೇಶಿಸಿದ್ದ ಅವರು ನಿರ್ದೇಶಕರಾಗಿ ಮೂರನೇ ಸಲ ಅದೃಷ್ಟ ಪರೀಕ್ಷೆ ಮಾಡಿಕೊಳ್ಳುತ್ತಿದ್ದಾರೆ.

■ ರಘು